## ಅಪರೂಪದ ಪ್ರವಾಸ ಲೇಖನ

‘ಶ್ವೇತಾ ಕಂಡ ಸೌದಿಯ ಸೊಬಗು’ (ಜ.26, ಸುಮಾ) ಈಚೆಗೆ ಓದಿದ ಅಪರೂಪದ ಪ್ರವಾಸ ಕಥನ. ತನ್ನದೇ ಆದ ಪ್ರತ್ಯೇಕ ಕೋಶದೊಳಗಿದ್ದ ಸೌದಿ ಅರೇಬಿಯಾ ಇತ್ತೀಚಿನ ವರ್ಷಗಳಲ್ಲಿ ಹೊರ ಜಗತ್ತಿಗೆ ತೆರೆದುಕೊಳ್ಳುತ್ತಿದೆ. ಅಲ್ಲಿನ ಸಾಂಸ್ಕೃತಿಕ ಬದುಕು ಉದಾರೀಕರಣದ ಹಾದಿಯಲ್ಲಿದೆ. ಈ ಬದಲಾವಣೆಗೆ ಮುಖ್ಯ ಕಾರಣವಾಗಿರುವ ಸೌದಿ ದೊರೆ ಮತ್ತು ಯುವರಾಜನ ಬಗ್ಗೆ ವಿವರಗಳು ಇದ್ದಿದ್ದರೆ ಲೇಖನ ಪರಿಪೂರ್ಣವಾಗುತ್ತಿತ್ತು.

—ಬಿ.ಎಂ. ಹನೀಫ್, ಬೆಂಗಳೂರು

## ಆಶ್ಚರ್ಯಕರ ಸೌದಿ...

ಸೌದಿ ಕುರಿತು ನಟಿ ಶ್ವೇತಾ ಅವರ ಅನುಭವ ಓದುತ್ತಿದ್ದರೆ, ಸೌದಿ ಬಗ್ಗೆ ತಿಳಿಯಬೇಕಾದ್ದು ಸಾಕಷ್ಟಿದೆ ಎನಿಸುತ್ತದೆ. ಅಲ್ಲಿನ ಜನಜೀವನ, ವ್ಯವಸ್ಥೆ ಬಗ್ಗೆ ಸಂತಸವಾಗುತ್ತದೆ. ಮರಳುಗಾಡಿನ ಪ್ರದೇಶವನ್ನು ಓಯಸಿಸ್‌ನಂತೆ ಪರಿವರ್ತಿಸಿ ಬದುಕುತ್ತಿರುವ ಅಲ್ಲಿನವರ ಬಗ್ಗೆ ಅಚ್ಚರಿ ಮೂಡುತ್ತದೆ.

—ಮಧು ಎಚ್.ಡಿ., ಚನ್ನರಾಯಪಟ್ಟಣ



## ಕಲೆಯಲ್ಲಿ ಸ್ತ್ರೀಶಕ್ತಿಯ ಬಿಂಬ

‘ಕಲಾವಿದೆಯರ ಕುಂಚದಲ್ಲಿ ಕನ್ನಡದ ಸಾಂಸ್ಕೃತಿಕ ಸಿರಿ’ (ಜ.26, ಆರ್.ಕೆ.) ಪುಟ ವರ್ಣರಂಜಿತವಾಗಿದೆ. ವಿಭಿನ್ನ ಕ್ಷೇತ್ರಗಳಲ್ಲಿ, ಉನ್ನತ ಹುದ್ದೆಗಳಲ್ಲಿದ್ದು, ತಮ್ಮ ಕಲಾ ಹವ್ಯಾಸಕ್ಕೆ ಮೂರ್ತರೂಪ ನೀಡಿರುವುದು ಅಚ್ಚರಿ ಮೂಡಿಸಿದೆ. ಲೇಖನ ಹಾಗೂ ಚಿತ್ರಕಲೆ, ಸ್ತ್ರೀಶಕ್ತಿಯ ಮತ್ತೊಂದು ಬಿಂಬವಾಗಿ ಪ್ರತಿಫಲಿಸಿದೆ.

—ಸುಮನಾ

## ವಾಹ್ ಎನಿಸಿತು

ಎಂಟು ಕಲಾವಿದೆಯರ ಕಲಾಕೃತಿಗಳನ್ನು ಪರಿಚಯ ಮಾಡಿಕೊಟ್ಟ ಲೇಖನ ವಾಹ್ ಎನ್ನುವಂತಿತ್ತು. ಕವಿ ಕುವೆಂಪು, ನಟ ರಾಜಕುಮಾರ್, ಪುರಂದರ ದಾಸರು, ಮೈಸೂರು ಒಡೆಯರ ಚಿತ್ರ ಕಲಾಕೃತಿಗಳು ಕಲಾವಿದೆಯರ ಬಣ್ಣಗಳಲ್ಲಿ ಜೀವಂತ ರೂಪ ಪಡೆದಂತಿದ್ದವು. ಶ್ರೇಷ್ಠ ವ್ಯಕ್ತಿತ್ವಗಳಿಗೆ ಕಲಾಗೌರವ ತೋರಿದ ಪರಿಯೂ ಎನಿಸಿತು. ಲೇಖನ ಓದಿ, ವಾಹ್ ಎಂಬ ಉದ್ಗಾರ ತಾನಾಗೇ ಹೊರಟಿತು.

—ಗೌರಿಬಿದನೂರು ರಂಗಪ್ಪ



## ಅಬ್ಬಾ, ಎಷ್ಟೊಂದು ಖಾದ್ಯಗಳು...

‘ಲಂಚ್ ಬಾಕ್ಸ್; ಹೊಸ ಪಂಚ್’ (ಜ.26, ಉಮಾ ಅನಂತ್) ಲೇಖನ ಸಂಗ್ರಹಯೋಗ್ಯ. ಶಾಲೆಗೆ ಹೋಗುವ ಮಕ್ಕಳ ಊಟದ ಡಬ್ಬಿ ನಿಭಾಯಿಸುವುದು ತಾಯಂದಿರಿಗೆ ನಿಜಕ್ಕೂ ಅಗ್ನಿಪರೀಕ್ಷೆ. ಡಬ್ಬಿ ಖಾಲಿ ಬಂದರೆ ಅಮ್ಮನ ಮೊಗದಲ್ಲಿ ಏನೋ ಸಾಧಿಸಿದಂಥ ಸಂತಸ.

ವೆಜ್ ರೋಲ್, ಅವಲಕ್ಕಿ ಡೋಕ್ಲಾ, ಸೊಪ್ಪಿನ ದೋಸೆ, ಬೀಟ್ರೂಟ್ ಮೂಂಗ್ಲೆಟ್, ಸಿರಿಧಾನ್ಯದ ಹಿಟ್ಟಿನಿಂದ ಮಾಡಿದ ಪೌಷ್ಟಿಕ ಇಡ್ಲಿ, ಮೆಂತೆ ಸೊಪ್ಪಿನ ರೊಟ್ಟಿ, ಕ್ಯಾಬೇಜ್ ಕುಲ್ಚ ಮಿಶ್ರಣಗಳ ಪಡ್ಡು, ಸ್ಪಾಂಜ್ ಬೀಟ್ರೂಟ್ ಬಾಲ್, ಪಾಲಕ್ ದೋಸೆ, ನವಣೆ ಬಿಸಿಬೇಳೆ ಬಾತ್, ಸಿರಿಧಾನ್ಯದ ಮಂಚೂರಿ, ಬಟಾಣಿ ಪನ್ನೀರ್ ಪರೋಟ ಅಬ್ಬಬ್ಬಾ, ಎಷ್ಟೊಂದು ರೆಸಿಪಿಗಳು... ತಾಯಂದಿರಿಗೆ ಹೊಸಹೊಸ ಪೌಷ್ಟಿಕ ರೆಸಿಪಿಗಳು ಸಿಕ್ಕ ಹಾಗಾಯಿತು.

—ನಿಶಾ. ಸಿ. ಗುಡೂರ್, ಬೆಂಗಳೂರು

## ನಾನೂ ರೆಸಿಪಿ ಪ್ರಯೋಗಿಸುತ್ತೇನೆ

‘ಲಂಚ್ ಬಾಕ್ಸ್; ಹೊಸ ಪಂಚ್’ ಲೇಖನ ಅಮ್ಮಂದಿರಿಗೆ ತುಂಬಾ ಉಪಯುಕ್ತವಾಗಿದೆ. ಜಂಕ್‌ಫುಡ್ ರುಚಿ ಹತ್ತಿಸಿಕೊಂಡು ಆರೋಗ್ಯ ಕೆಡಿಸಿಕೊಳ್ಳುವ ಮಕ್ಕಳ ಮನ ಒಲಿಸುವಂತೆ ಪೌಷ್ಟಿಕಯುತವಾಗಿಯೂ, ರುಚಿರುಚಿಯಾಗಿ ಸಾಕಷ್ಟು ಖಾದ್ಯಗಳನ್ನು ಮಾಡಬಹುದು ಎಂಬುದನ್ನು ಲೇಖನ ತೋರಿಸಿಕೊಟ್ಟಿತು. ಮಕ್ಕಳ ಬೆಳವಣಿಗೆ, ಆರೋಗ್ಯಕ್ಕೆ ಪೂರಕವಾಗಿ ಆಹಾರ ಹೇಗಿರಬೇಕು ಎಂಬುದನ್ನೂ ವಿವರಿಸಲಾಗಿದೆ. ಹೊಸ ರುಚಿಯ ಹುಡುಕಾಟದಲ್ಲಿರುವ ಅಮ್ಮಂದಿರಿಗೆ ಒಳ್ಳೆ ಮಾಹಿತಿ. ನಾನೂ ಈ ರೆಸಿಪಿಗಳನ್ನು ಪ್ರಯತ್ನಿಸುತ್ತೇನೆ.

—ರಿತುಪರ್ಣ, ಚಾಮರಾಜನಗರ

## ದೌರ್ಜನ್ಯಕ್ಕೆ ಮಿತಿಯುಂಟೇ?

‘ನೀರಕನ್ನಡಿಯ ಪತ್ರ’ (ಜ.26, ವಿ.ಆರ್.) ಚಿತ್ರಪಟ ಕಥನ ಮಾರ್ಮಿಕ ಹಾಗೂ ಅರ್ಥಪೂರ್ಣವಾಗಿದೆ. ಪ್ರಕೃತಿಯ ಮೇಲಿನ ಮಾನವನ ದೌರ್ಜನ್ಯಕ್ಕೆ ದೇಶಕಾಲಗಳ ಮಿತಿ ಇಲ್ಲ. ಹಿಂದಿನ ತಲೆಮಾರಾಗಲಿ, ಈಗಿನ ತಲೆಮಾರಾಗಲಿ, ಈ ದೇಶವಾಗಲಿ, ಪರದೇಶವಾಗಲಿ ಮಾನವನ ದೌರ್ಜನ್ಯ ಎಲ್ಲೆಲ್ಲೂ ನಿರಂತರ. ಚಿತ್ರಪಟ ಸಂದರ್ಭೋಚಿತವಾಗಿದ್ದು, ಇಂದಿನ ‘ಜೋಶಿ ಮಠ’ದ ಪರಿಸ್ಥಿತಿಗೆ ಕನ್ನಡಿ ಹಿಡಿದಂತಿದೆ.

—ಕೆ. ರಂಗಸ್ವಾಮಿ, ಬೆಂಗಳೂರು

## ದಾಖಲೆಯ ಪ್ರದರ್ಶನ

‘ನಿವೃತ್ತಿಯೇ ಇಲ್ಲದ ಮುಖ್ಯಮಂತ್ರಿ’ (ಜ.26, ಮಂಜುಶ್ರೀ ಕಡಕೋಳ) ಲೇಖನ ಉತ್ತಮವಾಗಿದೆ. ರಂಗಭೂಮಿಯಲ್ಲದೆ ಚಿತ್ರರಂಗ, ಕಿರುತೆರೆಯಲ್ಲೂ ಉತ್ತಮ ನಟ ಮುಖ್ಯಮಂತ್ರಿ ಚಂದ್ರು. ಅವರ ಟೈಮಿಂಗ್, ಆಂಗಿಕ ಅಭಿನಯ ಅತ್ಯದ್ಭುತ. ಪಾತ್ರಗಳಿಗೆ ಪರಕಾಯ ಪ್ರವೇಶ ಮಾಡುವ ನಟ. ಹಾಸ್ಯದೊಂದಿಗೆ, ಗಂಭೀರ ಪಾತ್ರಕ್ಕೂ ಸೈ. ಅವರ ‘ಮುಖ್ಯಮಂತ್ರಿ’ ನಾಟಕ ದಾಖಲೆಯನ್ನೇ ಬರೆದಿದೆ.

—ಬಿಲ್ಲೇಶ್ವರ ಅಚ್ಚು, ಹುಂಚ

## ಚಂದ್ರು ಚಿರಾಯುವಾಗಲಿ

‘ನಿವೃತ್ತಿಯೇ ಇಲ್ಲದ ಮುಖ್ಯಮಂತ್ರಿ’. ಭೇಷ್!. ಆದರೆ ಮೃತ್ಯುವಿಲ್ಲದ ಮುಖ್ಯಮಂತ್ರಿ ಅಲ್ಲವಲ್ಲ!. ಅದೂ ಒಂದು ಬಗೆಯ ನಿವೃತ್ತಿ. ಪ್ರಧಾನಿಗೂ ಉಂಟು ನಿಧನ (ಚಂದ್ರು ಚಿರಾಯುವಾಗಲಿ).

—ಸಿಪಿಕೆ, ಮೈಸೂರು



## ಶಾಲೆಗಳು ಚೇತರಿಸಿಕೊಳ್ಳಲಿ

‘ಕನ್ನಡದ ಅಸ್ತಿಭಾರ ಶಿಥಿಲ– ದುರ್ಬಲ; ನಮ್ಮದು ಗೋಪುರ ನಿರ್ಮಿಸುವ ಹಂಬಲ’ (ಜ.26, ರಘುನಾಥ ಚ.ಹ.) ‘ನಿಮ್ಮೊಡನೆ’ ಅಂಕಣದಲ್ಲಿ ಕನ್ನಡ ಮಾಧ್ಯಮ, ಶಾಲೆಗಳ ಕುರಿತು ಚರ್ಚಿಸಿರುವುದು ಸಂದರ್ಭೋಚಿತ. ಕನಿಷ್ಠ ಸೌಲಭ್ಯಗಳಿಲ್ಲದೇ ಇಂದು ಅನೇಕ ಸರ್ಕಾರಿ ಪ್ರಾಥಮಿಕ ಶಾಲೆಗಳು ಸೊರಗುತ್ತಿವೆ. ಮುಂದೊಂದು ದಿನ ಶಾಲೆಗಳನ್ನು ಮುಚ್ಚುವ ಸ್ಥಿತಿ ಬಂದರೆ ಅಚ್ಚರಿಪಡಬೇಕಿಲ್ಲ. ಅಂತಹ ಪರಿಸ್ಥಿತಿ ಬಂದೊದಗುವ ಮುನ್ನ ಶಾಲೆಗಳಿಗೆ ಕಾಯಕಲ್ಪ ನೀಡಬೇಕಿದೆ.

— ಅರವಿಂದ. ಜಿ. ಜೋಷಿ, ಮೈಸೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in